ನಿಜವಾದ ಶಿಕ್ಷಕರು ಎಂದು ನಾನು ಹೇಳುತ್ತೇನೆ.'

ಬಸಂತರಾಯ್ ಮೇಸ್ತ್ರು ಬಹಳಷ್ಟು ವಿಷಯಗಳನ್ನು ಹೇಳಿದರು. ಒಮ್ಮೆ ಅವರು ಆವೇಶಕ್ಕೊಳಗಾದರೆ, ಇನ್ನೊಮ್ಮೆ ರೇಗುತ್ತಿದ್ದರು. ಲಾಮೂ ಭಾಯಿಯವರು ಅವನ ಮನಸ್ಸಿನಲ್ಲಿದ್ದ ವಿಷವನ್ನೆಲ್ಲಾ ಹೊರಗೆ ಕಕ್ಕಿಸಿದರು. ಅವರನ್ನು ಹೊಗಳಿ, ಮನಸ್ಸನ್ನು ಸ್ವಚ್ಛಗೊಳಿಸಿದರು.

ಸಂಜೆ ಅವರು ಹೊರಡುವ ವೇಳೆಯಾದಾಗ ಹೇಳಿದರು, 'ನೀವೊಂದು ಕೆಲಸ ಮಾಡಿ...ಮಕ್ಕಳಲ್ಲಿ ಸ್ವಚ್ಛತೆ ಮತ್ತು ಶಿಸ್ತಿನ ಅಭ್ಯಾಸವನ್ನು ಮಾಡಿಸಿ. ಇದಕ್ಕಿಂತ ನಾವೇನು ಮಾಡಬೇಕಿಲ್ಲ. ಇಷ್ಟೇ ಸಾಕು... ನೋಡಿ, ಶಾಲೆಯ ಸ್ಥಿತಿಯಲ್ಲಿ ಸುಧಾರಣೆಯಾಗುವ ಪ್ರಯತ್ನವನ್ನು ನಾವು ಮಾಡಬೇಕಿದೆ.'

'ಖಂಡಿತಾ ಮಾಡ್ತೀನಿ.' ಮೇಸ್ತ್ರ ಕಣ್ಣುಗಳಲ್ಲಿ ಶ್ರದ್ಧಾ ಭಾವನೆ ಮೂಡುತ್ತಿತ್ತು.

ನಂತರ ಮೂರು ವಾರಗಳ ನಂತರ ನಿರೀಕ್ಷಕರಾದ ಲಾಮೂ ಭಾಯಿ ಶಾಲೆಗೆ ಬಂದರು.

ಶಾಲೆಯ ರೂಪವೇ ಬದಲಾಗಿತ್ತು. ಗೋಡೆಗಳ ಬಿರುಕುಗಳನ್ನು ಮುಚ್ಚಿ, ಸುಣ್ಣ ಬಳಿಯಲಾಗಿತ್ತು. ಗೋಡೆಗಳ ಮೇಲೆ ಸೂಕ್ತಿಗಳನ್ನು ಬರೆದು ನೇತು ಹಾಕಲಾಗಿತ್ತು. ಮಕ್ಕಳು ಸ್ವಚ್ಛವಾಗಿರುವುದು ಕಾಣ ಬರುತ್ತಿತ್ತು. ಶಾಲೆಯಲ್ಲಿ ಸ್ವಲ್ಪ ಶಿಸ್ತು ಸಹ ಇತ್ತು.

ಲಾಮೂ ಭಾಯಿಯವರಿಗೆ ಸಂತಸವಾಯಿತು. ಅವರು ಮೇಸ್ತ್ರು ಬಸಂತರಾಯ್ ಅವರ ಬೆನ್ನು ತಟ್ಟಿದರು. ಅವರ ಒಳಗೆ ಉಳಿದಿದ್ದ ವಿಷದ ಕೊನೆಯ ಹನಿಯನ್ನು ಸಹ ಒರೆಸಿದರು.

ಲಾಮೂ ಭಾಯಿಯವರು ಶಾಲೆಯಿಂದ ಹೊರಡುವಾಗ ಹೇಳಿದರು, 'ನಿಮ್ಮ ಕೆಲಸ ತುಂಬಾ ಚೆನ್ನಾಗಿದೆ...ತುಂಬಾ ಚೆನ್ನಾಗಿದೆ. ನಾನಿಲ್ಲಿಗೆ ಪದೇ-ಪದೇ ಬರಬೇಕೆಂದು ಮನಸ್ಸಾಗುತ್ತಿದೆ. ನಾನು ನಿಮ್ಮನ್ನು ಬೇರೆ ಶಾಲೆಗೆ ವರ್ಗಾವಣೆ ಮಾಡಿಸುತ್ತೇನೆ. ನೀವೊಂದು ಕೆಲಸ ಮಾಡಿ, ಮಕ್ಕಳಿಗೆ ಗಣಿತವನ್ನು ಹೇಳಿಕೊಡಿ. ಹಾಗಂತ ನೀವು ಅನುಭವಸ್ಥರು. ನೀವು ಶಾಲಾ-ನಿರೀಕ್ಷಕರು ಮತ್ತು ಅಧಿಕಾರಿಗಳ ಬಗ್ಗೆ ಯೋಚಿಸಬೇಡಿ... ಅವರೆಲ್ಲರೂ ಹೀಗೆಯೇ. ನಾವು ಹೆಚ್ಚೇನೂ ಮಾಡಬೇಕಿಲ್ಲ. ನೆನಪಿರಲಿ, ಉತ್ಸಾಹದಲ್ಲಿ ಹೆಚ್ಚು ಶ್ರಮ ಪಡುವ ಆವಶ್ಯಕತೆಯಿಲ್ಲ. ನೀವು ಮಕ್ಕಳ



ಗಣಿತದ ವಿಷಯದಲ್ಲಿ ಸುಧಾರಣೆ ಮಾಡಿ...ನಿಮ್ಮ ಶಾಲೆ ತುಂಬಾ ಚೆನ್ನಾಗಿಯೇ ಇದೆ, ಅದು ಇನ್ನೂ ಉತ್ತಮವಾಗುವುದು...ನಾವು ಸರ್ಕಾರದ ನೀತಿಯಂತೆ ಶಾಲೆಯನ್ನು ಶ್ರೇಷ್ಠ ಮಾಡಬೇಕಿಲ್ಲ. ಅದರಲ್ಲಿ ಅನೇಕ ಕೆಡುಕುಗಳಿವೆ, ಮೇಲು-ಕೀಳಿನ ಭಾವನೆಗಳಿವೆ, ಕಣ್ಣಾಮುಚ್ಚಾಲೆ ಆಟ ನಡೆಯುತ್ತದೆ. ನಿಮ್ಮ ಮನಸ್ಸಿಗೆ ಸಂತೋಷವಾಗುವ ಹಾಗೆ ಕೆಲಸ ಮಾಡಿ ಎಂದು ನಾನು ಬಯಸುತ್ತೇನೆ...'

ಮೇಸ್ತ್ರು, ಲಾಮೂ ಭಾಯಿಯವರ ಎರಡೂ ಕೈಗಳನ್ನು ಹಿಡಿದುಕೊಂಡರು. ಅವರ ಹಿಡಿತದಲ್ಲಿದ್ದ ದೃಢವಿಶ್ವಾಸವನ್ನು ನೋಡಿ ಲಾಮೂ ಭಾಯಿಯವರಿಗೆ ತುಂಬಾ ಖುಷಿಯಾಯಿತು.

ಒಂದೂವರೆ ತಿಂಗಳ ನಂತರ ಮತ್ತೆ ನಿರೀಕ್ಷಕರಾದ ಲಾಮೂ ಭಾಯಿ ಬಂದರು. ಮೊದಲ ಬಾರಿಗೆ ನೋಡಿದ ಶಾಲೆಗೂ, ಈಗಿನ ಶಾಲೆಗೂ ಭೂಮಿ-ಆಕಾಶದಷ್ಟು ಅಂತರವಿತ್ತು. ಮಕ್ಕಳ ಸಂಖ್ಯೆಯಲ್ಲಿ ಹೆಚ್ಚಳವಾಗಿತ್ತು.